ಶ್ರೀ ಡಿ. ಜಯದೇವರಾಜ ಅರಸ್.—ಈಗ ಸರ್ಕಾರದವರು ಸ್ಟೈಫಂಡರಿ ಗ್ರಾಜ್ಯುಯೆಟ್ಸ್ ಬಗ್ಗೆ ಒಂದು ನಿರ್ಧಾರಕ್ಕೆ ಬಂದಿದ್ದಾರೆ. ಆದರೆ ಇವರ ಬಗ್ಗೆ ಅದೇ ರೀತಿಯ ಕ್ರಮ ತೆಗೆದುಕೊಳ್ಳದಿದ್ದರೆ ಮತ್ತೆ ಇವರುಗಳು ನಿರುದ್ಯೋಗಿಗಳಾಗಬೇಕಾಗುತ್ತದೆ. ಇವರುಗಳು ಸಹ ಪದವೀಧರರಾಗಿದ್ದಾರೆ. ಆದಕಾರಣ ಸ್ಟೈಫಂಡರಿ ಗ್ರಾಜ್ಯುಯೆಟ್ಸ್ ತರಹ ಇವರನ್ನು ಟ್ರೀಟ್ ಮಾಡುತ್ತೀರಾ ?

SRI G. B. SHANKARA RAO.—Both these categories, local candidates as well as Stipendary Graduates are in service. Their claims will be considered on similar grounds since the persons in both the categories are working temporarily.

ಶ್ರೀ ವಿ. ಬಿ. ಬಾವಿ.—ಲೆಕ್ಕ ಉಪನ್ಯಾಸಕರು ಸರ್ಕಾರಿ ಕಾಲೇಜುಗಳಲ್ಲಿ ಸ್ಥಳೀಯ ಅಭ್ಯರ್ಥಿಗಳಾಗಿ ಏನು ಕೆಲಸ ಮಾಡುತ್ತಿದ್ದಾರೆ, ಇವರನ್ನು ಖಾಯಂ ಮಾಡಲು ಅಡಚಣೆ ಏನಾದರೂ ಇದೆಯೇ ಮತ್ತು ಕಾನೂನಿನ ತೊಡಕು ಏನಾದರು ಇದೆಯೇ ? ಇವರ ಕೆಲಸವನ್ನು ಖಾಯಂ ಮಾಡುವ ವಿಚಾರ ಸರ್ಕಾರದಲ್ಲಿದ್ದರೆ ಎಷ್ಟು ದಿವಸಗಳಲ್ಲಿ ಮಾಡುತ್ತೀರಾ ?

ಶ್ರೀ ಜಿ. ಬಿ. ಶಂಕರರಾವ್.—ಇವರುಗಳನ್ನು ಸ್ಥಳೀಯ ಅಭ್ಯರ್ಥಿಗಳನ್ನಾಗಿ ನೇಮಕ ಮಾಡಿಕೊಂಡಿರುವ ಕಾರಣದಿಂದ ಖಾಯಂ ಮಾಡುವುದಕ್ಕಾಗುವುದಿಲ್ಲ. ಆದಕಾರಣ ಮಾನ್ಯ ಸದಸ್ಯರ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ.

ಶ್ರೀ ವಿ. ಬಿ. ಬಾವಿ.—ಇವರನ್ನು ಖಾಯಂ ಮಾಡಲು ಸರ್ಕಾರಕ್ಕೆ ಇರುವ ತೊಂದರೆ ಏನು ?

SRI G. B. SHANKARA RAO.—Since they have not been appointed permanently, we cannot regularise their services or absorb them in Government service.

ಶ್ರೀ ಕೆ. ಎಸ್. ಕಾಳಮುರಿಗೌಡ.—ಇವರುಗಳು ಮೆರಿಟ್‌ನಲ್ಲಿ ಆಯ್ಕೆಯಾದರೆ ಸೆಲೆಕ್ಟ್ ಆಗುತ್ತಾರೆಂದು ಮಾನ್ಯ ಮಂತ್ರಿಗಳು ಹೇಳಿದರು ಆದರೆ ಇದು ಮಾಮೂಲಿಯಂತೆ ನಡೆಯುವ ಕೆಲಸ. ಇವರುಗಳು ೪-೫ ವರ್ಷಗಳಿಂದ ಕೆಲಸ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಸ್ಟೈಫಂಡರಿ ಗ್ರಾಜ್ಯುಯೆಟ್ಸ್ ಬಗ್ಗೆ ಆಶ್ವಾಸನೆ ಕೊಟ್ಟಿದ್ದಾರೆ : ಇದರ ಜೊತೆಗೆ ಇಂಜಿನಿಯರಿಂಗ್ ಪೋಸ್ಟ್‌ಗಳಲ್ಲಿ ಮತ್ತು ಡಾಕ್ಟರ್ ಪೋಸ್ಟ್‌ನಲ್ಲಿ ಸ್ಥಳೀಯ ಅಭ್ಯರ್ಥಿಗಳಾಗಿ ಕೆಲಸ ಮಾಡುತ್ತಿರುವವರು ಪಿ.ಎಸ್.ಸಿ. ಮುಂದೆ ಬಂದಾಗ ಕನ್ಸಿಡರ್ ಮಾಡುವುದಾಗಿ ಸಹ ಭರವಸೆ ಕೊಟ್ಟಿದ್ದಾರೆ. ಆದಕಾರಣ ಇವರ ಬಗ್ಗೆಯೂ ಸಹ ತಾವು ಭರವಸೆ ಕೊಡುತ್ತೀರಾ ?

ಶ್ರೀ ಜಿ. ಬಿ. ಶಂಕರರಾವ್.—ಈ ಉಪನ್ಯಾಸಕರುಗಳನ್ನು ಸ್ಥಳೀಯ ಅಭ್ಯರ್ಥಿಗಳನ್ನಾಗಿ ಪರಿಗಣಿಸಲಾಗುತ್ತದೆಂದು ಈಗಾಗಲೇ ನಾನು ಸ್ಪಷ್ಟಪಡಿಸಿದ್ದೇನೆ.

Plan for Tree-Growth in Karnataka Reserve Forest Plantations

889. SRI D. T. MAYANNA (Huliyurdurga).—Will the Minister for Forest, Mines and Geology be pleased to state.—

(a) the schemes and the varieties of plantation trees which are to be grown in the Karnataka Reserved Forest ;

(b) the schemes which are framed by the Government to grow plantation trees for industries in this Reserved Forest ;

(c) whether the Government would utilise the proceeds of plantation trees which are grown under the Schemes namely : 1. Farm Forestry. 2. Social Forestry. 3. Minimum Needs Forestry for the development of Rural Areas ;

(d) whether the Government has classified the Reserved Forest to grow different varieties of plantation trees suiting to the nature of soil· climate and rain ?

SRI G. MADE GOWDA(Minister for Forest, Mines and Geology).—

(a) The following Schemes are framed to grow the different varieties of plantation trees in Karnataka Reserved Forest.

1. Teak Wood Plantation Scheme
2. Soft Wood Plantation Scheme
3. Cashewnut Plantation Scheme
4. Sandal Wood Plantation Scheme
5. Eucalyptus Plantation Scheme
6. Different varieties ofi trees Plantation Scheme
7. Social Forestry Scheme

(b) There are Schemes to grow Eucalyptus· Soft Wood and Cashew Nut Trees *etc.*, for Industries. In addition to this, different varieties of small trees plantation for small Scale Industries would also be grown.

(c) Yes

(d) Yes

ಶ್ರೀ ಡಿ. ಟಿ. ಮಾಯಣ್ಣ.—ಇಲ್ಲಿ ಒಟ್ಟು ೭ ಯೋಜನೆಗಳಿವೆ ಎಂದು ಹೇಳಿದ್ದಾರೆ. ಕರ್ನಾಟಕ ರಾಜ್ಯದ ಯಾವ ಯಾವ ಭಾಗಗಳಲ್ಲಿ ಎಷ್ಟೆಷ್ಟು ಎಕರೆಗಳಲ್ಲಿ ಈ ಯೋಜನೆಯನ್ನು ಜಾರಿಗೆ ತರಲಾಗುತ್ತದೆಂಬುದನ್ನು ಹೇಳುತ್ತೀರಾ ?

ಶ್ರೀ ಜಿ. ಮಾದೇಗೌಡ.— ನಾನಾ ತರಹದ ಮರಗಳನ್ನು ಬೆಳಸುವ ಯೋಜನೆ ಇದೆ ಎಂದು ಇಲ್ಲಿ ಹೇಳಲಾಗಿದೆ ಇದರಲ್ಲಿ ತೇಗದ ಮರ ಮತ್ತು ಗಂಧದ ಮರಗಳು ಮುಖ್ಯವಾದವುಗಳು. ಮಲೆನಾಡು ಪ್ರದೇಶದಲ್ಲಿ ಹೆಚ್ಚು ಮರಗಳನ್ನು ಬೆಳೆಸಲಾಗುತ್ತದೆ ಮತ್ತು ಎಲ್ಲ ಜಿಲ್ಲೆಗಳಲ್ಲಿಯೂ ಸಹ ಸೋಷಿಯಲ್ ಫಾರೆಸ್ಟ್ರಿ ಸ್ಕೀಮಿನಡಿಯಲ್ಲಿ ಪ್ರತಿವರ್ಷ ಒಂದೆರಡು ಸಾವಿರ ಎಕರೆಗಳಲ್ಲಿ ಮರಗಳನ್ನು ಬೆಳೆಸಲಾಗುತ್ತಿದೆ.

ಶ್ರೀ ಡಿ. ಟಿ. ಮಾಯಣ್ಣ.— ತುಮಕೂರು ಜಿಲ್ಲೆಯಲ್ಲಿ ಹೆಚ್ಚು ಗಂಧದ ಮರಗಳನ್ನು ಬೆಳೆಸುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಜಿ. ಮಾದೇಗೌಡ.—ಈಗ ತುಮಕೂರು ಜಿಲ್ಲೆಯಲ್ಲಿ ಗಂಧದ ಮರಗಳನ್ನು ಜಾಸ್ತಿ ಬೆಳೆಯಲಾಗುತ್ತಿದೆ. ಆದಕಾರಣ ಅದು ಕಳ್ಳತನವಾಗದಂತೆ ಸೂಕ್ತ ಬಂಧೋಬಸ್ತು ಮಾಡಿದ್ದೇವೆ. ಇದನ್ನು ಯಾರು ಬೆಳೆಸುವುದಿಲ್ಲ ಇವು ತನ್ನಷ್ಟಕ್ಕೆ ಬೆಳೆದುಕೊಳ್ಳುತ್ತವೆ. ಈ ಗಂಧದ ಮರಗಳಿಗೆ ಸಂಬಂಧಪಟ್ಟಂತೆ ಒಂದು ಎಸ್ಟೇಟ್‌ನ್ನು ಕಳೆದವರ್ಷ ಮಾಡಿದ್ದೇವೆ.

ಶ್ರೀ ಎಂ. ಸಿ. ನಾಣಯ್ಯ.— ಮಾನ್ಯ ಅಧ್ಯಕ್ಷರೇ, ಇಲ್ಲಿ ಸರ್ಕಾರದವರು ಮರಗಳನ್ನು ಬೆಳೆಸುವುದರ ಬಗ್ಗೆ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಮೀಸಲು ಅರಣ್ಯಗಳಲ್ಲಿ ಸಹ ಇದನ್ನು ಬೆಳೆಸುತ್ತಿದ್ದಾರೆ. ಕರ್ನಾಟಕದಲ್ಲಿ ಮೀಸಲು ಅರಣ್ಯ ಇಲ್ಲ, ಮೈದಾನ ಮಾತ್ರ ಇರುವುದು. ಆದರೆ ಇವರು ಇಲ್ಲಿ ಈ ರೀತಿ ತೋರಿಸಿದ್ದಾರೆ. ಇದರ ಜೊತೆಗೆ ಗ್ರೀನ್-ಬೆಲ್ಟ್ ಏರಿಯಾದಲ್ಲಿರುವ

ಮರಗಳನ್ನು ಕಡಿದು ಅಲ್ಲಿ ಹೊಸದಾಗಿ ಮರಗಳನ್ನು ಬೆಳೆಸುತ್ತಿದ್ದಾರೆ. ಪಶ್ಚಿಮ ಘಟ್ಟದಲ್ಲಿ ಇರತಕ್ಕಂಥ ಗ್ರೀನ್-ಬೆಲ್ಟ್ ಏರಿಯಾವನ್ನು ಹಾಳು ಮಾಡುತ್ತಿದ್ದಾರೆ. ಇದಕ್ಕೆ ಬದಲು ಅಂದರೆ ಸರ್ಕಾರದವರೇ ಹೊಸದಾಗಿ ಮರಗಳನ್ನು ಗ್ರೀನ್-ಬೆಲ್ಟ್ ಏರಿಯಾದಲ್ಲಿ ಬೆಳೆಸುವುದಕ್ಕೆ ಬದಲು ಅಲ್ಲಿರುವಂತಹ ಪ್ರಕೃತಿ ದತ್ತವಾಗಿ ಬೆಳೆದಿರುವ ಮರಗಳನ್ನು ಕಡಿಯುವುದನ್ನು ನಿಲ್ಲಿಸುತ್ತೀರಾ ? ಇರತಕ್ಕಂಥ ಅರಣ್ಯವನ್ನು ಉಳಿಸಿಕೊಳ್ಳುತ್ತೇವೆಂದು ಆಶ್ವಾಸನೆ ಕೊಡುತ್ತೀರಾ ?

ಶ್ರೀ ಜಿ. ಮಾದೇಗೌಡ. — ಮಾನ್ಯ ನಾಣಯ್ಯನವರು ಇದರ ಬಗ್ಗೆ ಇಲ್ಲಿ ಅನೇಕ ಸಲ ಪ್ರಸ್ತಾಪ ಮಾಡಿದ್ದಾರೆ ಮತ್ತು ಅದಕ್ಕೆ ನಾನೂ ಉತ್ತರ ಸಹ ಕೊಟ್ಟಿದ್ದೇನೆ. ಪಶ್ಚಿಮಘಟ್ಟದ ಕಾಡಿನ ಬಗ್ಗೆ ಅವರಿಗಿರುವಷ್ಟೇ ಕಳಕಳಿ ನಮಗೂ ಸಹ ಇದೆ.

ಶ್ರೀ ಎಂ. ಸಿ. ನಾಣಯ್ಯ.— ಆದರೆ ಆ ರೀತಿ ನಡೆದುಕೊಳ್ಳುತ್ತಿಲ್ಲ. ಹೊಸದಾಗಿ ಅರಣ್ಯವನ್ನು ಬೆಳೆಸುವುದಕ್ಕೆ ಬದಲು ಇರತಕ್ಕಂಥ ಅರಣ್ಯವನ್ನು ಉಳಿಸಿಕೊಳ್ಳುವ ಒಗ್ಗೆ ಮಾನ್ಯ ಮಾದೇಗೌಡರಿಗೆ ಕಳಕಳಿ ಇದ್ದರೂ ಕೂಡ ಈ ಸರ್ಕಾರದ ಹಿಡಿತದಲ್ಲಿ ಅದು ಸಾಧ್ಯವಾಗುತ್ತಿಲ್ಲ ಎಂಬುದನ್ನು ಸ್ಪಷ್ಟವಾಗಿ ಹೇಳಿದರು.

ಶ್ರೀ ಜಿ. ಮಾದೇಗೌಡ.—ಇಲ್ಲಿ ನಾನು ಸರ್ಕಾರದ ವತಿಯಿಂದ ಅಂದರೆ ಸರ್ಕಾರದ ಪ್ರತಿನಿಧಿಯಾಗಿ ಉತ್ತರ ಕೊಡುತ್ತಿದ್ದೇನೆಯೇ ಹೊರತು ನಾನು ವೈಯಕ್ತಿಕವಾಗಿ ಉತ್ತರ ಕೊಡುತ್ತಿಲ್ಲ. ಇಲ್ಲಿ ಕಾಡನ್ನು ಹೊಸದಾಗಿ ಬೆಳೆಸುವುದು ಒಂದು ಪ್ರಶ್ನೆಯಾದರೆ ಇರತಕ್ಕಂಥ ಕಾಡನ್ನು ಉಳಿಸಿಕೊಳ್ಳುವುದು ಇನ್ನೊಂದು ಪ್ರಶ್ನೆಯಾಗಿದೆ. ಕಾಡನ್ನು ಸಂಪೂರ್ಣವಾಗಿ ಕಡಿಯಬಾರದೆಂದರೆ ಕಷ್ಟವಾಗುತ್ತದೆ ಏಕೆಂದರೆ, ನಾವು ಪ್ರಕೃತಿಯನ್ನೇ ಅವಲಂಬಿಸಿದ್ದೇವೆ. ಪ್ರಕೃತಿಯಲ್ಲಿ ಎಲ್ಲ ವಸ್ತುಗಳು ಒಂದಲ್ಲ ಒಂದು ದಿನ ನಶಿಸಿ ಹೋಗುತ್ತವೆ. ಎಷ್ಟು ಕಾಡನ್ನು ಉಳಿಸಿಕೊಳ್ಳಬೇಕೋ ಅಷ್ಟನ್ನು ಉಳಿಸಿಕೊಂಡು ರಕ್ಷಣೆ ಮಾಡಬೇಕೆಂಬ ತತ್ವವನ್ನು ನಾನು ಒಪ್ಪುತ್ತೇನೆ. ಆದರೆ ನೆಟ್ಟ ಗಿಡಗಳನ್ನೆಲ್ಲಾ ಕಡಿಯಬಾರದೆಂಬ ತತ್ವವನ್ನು ನಾನು ಒಪ್ಪುವುದಿಲ್ಲ. ಏಕೆಂದರೆ, ಕಾಡನ್ನೇ ಅವಲಂಬಿಸಿರುವ ಕೈಗಾರಿಕೆಗಳಂ ಮತ್ತು ಜನರು ಇದ್ದಾರೆ. ಕಾಡನ್ನು ಕಡಿಯದಿದ್ದರೆ ಇವರುಗಳು ನಿರುದ್ಯೋಗಿಗಳಾಗುತ್ತಾರೆ. ಆದಕಾರಣ ಕಾಡನ್ನು ಕಡಿಯಲೇ ಬಾರದೆಂಬ ತತ್ವವನ್ನು ನಾನು ಒಪ್ಪುವುದಿಲ್ಲ. ಆದರೆ ಕಾಡಿನ ಸಮತೋಲನವನ್ನು ಉಳಿಸಿಕೊಳ್ಳುವ ತತ್ವದಲ್ಲಿ ನನಗೆ ವಿಶ್ವಾಸವಿದೆ. ಈ ಕಾರಣದಿಂದ ನಾವು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಕಾಡನ್ನು ಬೆಳೆಸುವ ಕಾರ್ಯಕ್ರಮ ಹಾಕಿಕೊಂಡಿದ್ದೇವೆ.

ಶ್ರೀ ಎಂ. ಸಿ. ನಾಣಯ್ಯ.— ಇದನ್ನು ನಾನು ಖಂಡಿತವಾಗಿ ಒಪ್ಪುತ್ತೇನೆ. ಈಗ ಕಡಿಮೆ ಮಳೆ ಬೀಳುವ ಕೋಲಾರದಲ್ಲಿ ನೀಲಗಿರಿ ಮರಗಳನ್ನ ಬೆಳೆಸುತ್ತಿದ್ದೀರಿ. ಇದನ್ನು ಯಾರಿಗಾಗಿ ಬೆಳೆಸುತ್ತಿದ್ದೀರಿ ಎಂದರೆ, ಹರಿಹರದ ಫಾಲಿಫೈಬರ್ಸ್‌ನವರಿಗೆ ಕೊಡಲು ಬೆಳೆಸುತ್ತಿದ್ದೀರಿ. ಆದರೆ ಹೆಚ್ಚು ಮಳೆ ಬೀಳುವ ಪಶ್ಚಿಮಘಟ್ಟದ ಪ್ರದೇಶಗಳಲ್ಲಿ ಮತ್ತು ದೊಡ್ಡದೊಡ್ಡ ನದಿಗಳು ಹರಿಯುವಂತಹ ಪ್ರದೇಶಗಳಲ್ಲಿ ಇರುವಂತಹ ಮರಗಳನ್ನು ಕಡಿಯದಿರುವಂತಹ ಕಾರ್ಯಕ್ರಮ ಕೈಕೊಳ್ಳುತ್ತೀರಾ ? ಇಲ್ಲದಿದ್ದರೆ ಮಳೆಯ ಪ್ರಮಾಣ ಕಡಿಮೆಯಾಗುತ್ತದೆ. ಈಗಾಗಲೇ ಕಾವೇರಿ ನದಿ ಹರಿಯುವ ಪ್ರದೇಶಗಳಲ್ಲಿ ಮಳೆ ಕಡಿಮೆಯಾಗಿದೆ. ಇದರಿಂದ ನದಿಯಲ್ಲಿ ಹೆಚ್ಚು ನೀರು ಬಂದಿಲ್ಲ. ಇದರ ಒಂದು ಪರಿಣಾಮ ಮುಂದೆ ಮಂಡ್ಯ ಜಿಲ್ಲೆಯ ಮೇಲೂ ಸಹ ಆಗಬಹುದು. ಆದಕಾರಣ ಇದರ ಬಗ್ಗೆ ಒಂದು ಸ್ಪಷ್ಟವಾದಂಥ ನಿಲುವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಜಿ. ಮಾದೇಗೌಡ.— ಮಾನ್ಯ ನಾಣಯ್ಯನವರು ಹೇಳಿದ್ದನ್ನು ನಾನು ಅರ್ಥಮಾಡಿಕೊಂಡಿದ್ದೇನೆ ಮತ್ತು ಇದು ಸರ್ಕಾರಕ್ಕೂ ಗೊತ್ತಿದೆ. ಇದೆ ಕಾರಣದಿಂದ ಜಮ್ಮಾಮಲೈ ಏರಿಯಾದಲ್ಲಿರುವ ಕಾಡನ್ನು ನಾವು ರಿಜರ್ವ್ ಮಾಡಿದ್ದೇವೆ. ಕೊಡಗಿನ ಜಮ್ಮಾಮಲೈ ಲ್ಯಾಂಡ್‌ನಲ್ಲಿ ಯಾವ ಮರಗಳನ್ನೂ ಮುಟ್ಟಕೂಡದು ಎನ್ನುವುದನ್ನು ನಾವು ಈಗಾಗಲೇಒಪ್ಪಿಕೊಂಡಿದ್ದೇವೆ. ಕಾವೇರಿ ಬೇಸಿನ್‌ನಲ್ಲಿರತಕ್ಕಂಥಾ ಮರಗಳನ್ನು ನಮಗೆ ಉತ್ಪತ್ತಿ ಬರತಕ್ಕಂಥಾ ಮರಗಳನ್ನು ಪಂಂದುವರೆಸಿಕೊಂಡು ಹೋಗಬೇಕೆಂಬುದು ಮನವರಿಕೆಯಾಗಿದೆಯೆಂದು ನಾನು ಅನೇಕ ಸಾರಿ ಮುಟ್ಟಬೇಡಿ ಅಂತ ಹೇಳಿದ್ದೇನೆ. ಆದುದರಿಂದ ನಾವು ಜಮ್ಮಾಮಲೈ ಲ್ಯಾಂಡ್ ಅನ್ನು ಮುಟ್ಟುವುದಕ್ಕೆ ಹೋಗುತ್ತಾ ಇಲ್ಲ. ಆದನ್ನು ಯಾರೂ ಸಹ ಮುಟ್ಟಕೂಡದು ಅದು ರಿಸರ್ವ್ ಆಗಿರಬೇಕೆಂಬುದು ನಾವು ತತ್ವಶಃ ಒಪ್ಪಿಕೊಂಡಿದ್ದೇವೆ. ಆದರೆ ಪಶ್ಚಿಮ ಘಟ್ಟದಲ್ಲಿರುವ ಮರಗಳನ್ನು ಮುಟ್ಟಕೂಡದು ಅನ್ನುವುದನ್ನು ನಾವು ಒಪ್ಪಲಿಕ್ಕೆ ಸಾಧ್ಯವಿಲ್ಲ.

ಶ್ರೀ ಡಿ. ಟಿ ಮಾಯಣ್ಣ.— ಸೋಷಿಯಲ್ ಫಾರೆಸ್ಟ್ರಿ ಕಾರ್ಯಕ್ರಮ ಕೆಲವು ಕೆರೆಗಳ ಅಂಚಿನಲ್ಲಿ, ರಸ್ತೆ ಪಕ್ಕದಲ್ಲಿ ಬಿಟ್ಟುಹೋಗಿವೆ, ಕೆಲವು ಪ್ರದೇಶಗಳಲ್ಲಿ ಆ ಮರಗಳು ಹಾಕುವುದು ಉಳಿದುಕೊಂಡಿವೆ. ಅದನ್ನು ಆಲ್ಲಿ ಹಾಕಿ ಬೆಳೆಸುವುದಕ್ಕೆ ನಿಮ್ಮ ಅಧಿಕಾರಿಗಳಿಗೆ ಆದೇಶ ಕೊಡುತ್ತೀರಾ ?

ಎರಡನೆಯದಾಗಿ ಶ್ರೀಗಂಧದ ಮರ ತುಮಕೂರು ಜಿಲ್ಲೆಯಲ್ಲಿ ಮತ್ತು ಸಿಗಾ ತಾಲ್ಲೂಕಿನಲ್ಲಿ ಚೆನ್ನಾಗಿ ಬೆಳೆಯುವುದರಿಂದ ಆಲ್ಲಿ ಆ ಮರವನ್ನು ಹಚ್ಚು ಹೆಚ್ಚಾಗಿ ಬೆಳೆಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಜಿ. ಮಾದೇಗೌಡ.— ಈ ಶ್ರೀಗಂಧದ ಒಂದು ಎಸ್ಟೇಟ್ ಆನ್ನೇ ಸಂಪೂರ್ಣವಾಗಿ ಮಾಡಬೇಕು. ಆಲ್ಲಿ ಈ ಮರಗಳನ್ನು ಬೆಳೆಸಬೇಕೆಂದು ಕಾರ್ಯಕ್ರಮ ಹಾಕಿಕೊಂಡು ಕಳೆದ ವರ್ಷದಿಂದಲೂ ಅದನ್ನು ಮಾಡಿಕೊಂಡು ಬರುತ್ತಿದ್ದೇವೆ. ಆರೀತಿಯಾಗಿ ಹೋದವರ್ಷ ನಾವು ಒಂದು ಸಾವಿರ ಎಕರೆಯಷ್ಟು ಮಾಡಿದ್ದೇವೆ. ಅದೇ ರೀತಿಯಾಗಿ ಈ ವರ್ಷವೂ ಕೂಡ ಒಂದು ಸಾವಿರ ಎಕರೆಯಲ್ಲಿ ಮಾಡಬೇಕೆಂದು ಮಾಡಿದ್ದೇವೆ. ಆ ಕಾರ್ಯಕ್ರಮವನ್ನು ನಾವು ಮುಂದುವರೆಸಿಕೊಂಡು ಹೋಗುತ್ತೇವೆ. ರಸ್ತೆ ಅಂಚಿನಲ್ಲಿಯಾಗಲಿ, ಕೆರೆಗಳ ಪಕ್ಕದಲ್ಲಿಯಾಗಲಿ ಖಾಲಿ ಇರುವ ಜಾಗಗಳಲ್ಲಿ ಮರಗಳನ್ನು ಬೆಳೆಸುವುದಕ್ಕೆ ಸೋಷಿಯಲ್ ಫಾರೆಸ್ಟ್ರಿ ಸ್ಕೀಂ ಮೂಲಕ ಎಲ್ಲಾ ಜಿಲ್ಲೆಗಳಲ್ಲೂ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಸೋಷಿಯಲ್ ಫಾರೆಸ್ಟ್ರಿ ಮೂಲಕ ಈ ಮರಗಳನ್ನು ಬೆಳೆಸಿದರೆ ನಮಗೆ ಬೇಕಾದಷ್ಟು ಹಣವೂ ಬರುತ್ತದೆ. ಈ ರೀತಿ ಮಾಡಬೆ ಕೆಂದು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನವರು ಒಂದು ಸ್ಕೀಂ ಅನ್ನು ನಮಗೆ ಕಳುಹಿಸಿಕೊಟ್ಟಿದ್ದಾರೆ. ಆದ್ದರಿಂದ ನಮಗೆ ಒಳ್ಳೆಯ ಪ್ರತಿಫಲವೂ ಬರುತ್ತದೆ. ಎಂದು ಕಂಡುಬಂದಿರುವುದರಿಂದ ಎಲ್ಲಾ ಜಿಲ್ಲೆಗಳಲ್ಲೂ ಕರ್ನಾಟಕ ಮೀಸಲು ಅರಣ್ಯದಲ್ಲಿ ವಿವಿಧ ಜಾತೀಯ ಮರಗಳನ್ನು ಬೆಳೆಸುವ ಕಾರ್ಯಕ್ರಮವನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಡಿ. ಟಿ. ಮಾಯಣ್ಣ.— ಈ ಪ್ರಶ್ನೆಯ (ಈ)ಗೆ ಉತ್ತರವಾಗಿ ಹೌದು ಎಂದು ಹೇಳಿದ್ದೀರಿ. ಇದು ನಿಮ್ಮ ಕೈಯಲ್ಲಿ ಆಗುತ್ತದೆಯೇ ? ನೀವು ಫಾರೆಸ್ಟ್ ಅನ್ನು ಬೆಳೆಸದೇ ಹೋದರೆ ಮುಂದೆ ಮಳೆ ಬಾರದೆ. ಮುಂದಿನ ಜನಾಂಗಕ್ಕೆ ಬಹಳ ತೊಂದರೆಯಾಗುತ್ತದೆ. ಆದುದರಿಂದ ತಮ್ಮ ಅಧಿಕಾರಾವಧಿಯಲ್ಲಿ ಈ ಒಂದು ಅರಣ್ಯವನ್ನು ಬೆಳೆಸುವ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆಂದು ಏನಾದರೂ ಆಶ್ವಾಸನೆ ಕೊಡುತ್ತೀರಾ ?

ಶ್ರೀ ಎಂ. ಸಿ. ನಾಣಯ್ಯ.— ಇಂಥಾ ಕಾರ್ಯಕ್ರಮವನ್ನು ಮಾಡಬೇಕಾದರೆ ಶ್ರೀ ಮಾದೇಗೌಡರಿಂದ ಸಾಧ್ಯವೇ ವಿನಾ ಬೇರೆಯವರಿಂದ ಸಾಧ್ಯವಿಲ್ಲ.

ಶ್ರೀ ಜಿ. ಮಾದೇಗೌಡ.— ತಾವು ಹೇಳಿದ ರೀತಿಯಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಭೂಗುಣ, ವಾಯುಗುಣ ಮತ್ತು ಮಳೆ ಅವುಗಳಿಗನುಸಾರವಾಗಿ ಯಾವ್ಯಾವ ಪ್ರದೇಶದಲ್ಲಿ ಯಾವ್ಯಾವ ಮರವನ್ನು ಬೆಳೆಯಬಹುದು ಆ ಬಗ್ಗೆ ಸಂಶೋಧನೆ ನಡೆಸಿ ಆಲ್ಲಲ್ಲಿ ಯಾವ್ಯಾವ ಗಿಡಗಳನ್ನು ಹಾಕಬೇಕು ಅಂಥ ಗಿಡಗಳನ್ನು ಹಾಕಬೇಕೆನ್ನುವ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ತಮಗೆ ಹೇಳಬೇಕಾದರೆ ೪೦ ಇಂಚು ಮಳೆ ಆಗುವ ಪ್ರದೇಶದಲ್ಲಿ ನೀಲಗಿರಿ ಗಿಡಗಳನ್ನು ಹಾಕಿದರೆ ಆಲ್ಲಿ ಚೆನ್ನಾಗಿ ಬರುತ್ತದೆ. ೪೦ ಇಂಚು ಆಗುವ ಕಡೆ ಹಾಕಿದರೆ ಅಷ್ಟು ಚೆನ್ನಾಗಿ ಬರುವುದಿಲ್ಲ. ಆದ್ದರಿಂದ ಅಂಥಾ ಕಡೆ ಹಾಕುತ್ತಾ ಇಲ್ಲ. ಎಲ್ಲೆಲ್ಲಿ ಯಾವ್ಯಾವ ಗಿಡಗಳನ್ನು ಹಾಕಿದರೆ ಚೆನ್ನಾಗಿ ಬರುತ್ತದೆ ಅಂಥಾ ಗಿಡಗಳನ್ನು ಹಾಕುತ್ತೇವೆಂದು ಹೇಳುತ್ತೇನೆ.

ಶ್ರೀಮತಿ ಅನಸೂಯ ಗಜಾನನ ಶರ್ಮ.— ಮಾನ್ಯ ಸಚಿವರು ನಾಣಯ್ಯನವರು ಹೇಳಿದ್ದಕ್ಕೆ ಆಲ್ಲಿಯ ಕಾವೇರಿ ಮಂಡಿಲಲ್ಲಿ ಇರತಕ್ಕಂಥಾ ಜಾಗದಲ್ಲಿ ಗಿಡಗಳನ್ನು ನಿಲ್ಲಿಸುತ್ತೇವೆ ಎಂದು ಹೇಳಿದರಲ್ಲಾ ಅದೇ ರೀತಿಯಾಗಿ ನಮ್ಮ ಪಶ್ಚಿಮ ಘಟ್ಟದಲ್ಲಿ ಏತಕ್ಕೆ ನಿಲ್ಲಿಸಬಾರದು ? ದಯವಿಟ್ಟು ಹೇಳುತ್ತೀರಾ ?

ಶ್ರೀ ಜಿ. ಮಾದೇಗೌಡ — ತಮ್ಮ ಭಾಗದಲ್ಲಿ ವರಾಹಿ ಮುಂತಾದ ಯೋಜನೆಗಳು ಇರುವುದರಿಂದ ಆಲ್ಲಿ ಇರತಕ್ಕಂಥಾವುಗಳನ್ನು ನಾವು ಕಡಿಯಲೇಬೇಕಾಗಿದೆ.